## ತಾತನ ಪತ್ನಿ

ಗುಂಡನ ಪತ್ನಿಗೆ ಮೊಮ್ಮಕ್ಕಳಾದರೂ ಅಜ್ಜಿ ಎಂದು ಕರೆಸಿಕೊಳ್ಳಲು ಮನಸ್ಸು ಒಪ್ಪುತ್ತಿರಲಿಲ್ಲ. 'ನನಗೇನೂ ಮಹಾ ವಯಸ್ಸು ಆಗಿಲ್ಲ' ಎಂದು ಹೇಳಿಕೊಂಡು ಓಡಾಡುತ್ತಿದ್ದಳು. ಅದಕ್ಕೆ ತಕ್ಕಂತೆ ಸಿಂಗಾರ ಬೇರೆ. ಆ ದಿನ ಹಿರಿಮಗನ ಮಗಳ ಹುಟ್ಟಿದ ಹಬ್ಬ. ಗುಂಡನ ಪತ್ನಿ ಸಂಭ್ರಮದಿಂದ ಪೇಟೆಗೆ ಹೋಗಿ ಗಿಫ್ಟ್ ಪ್ಯಾಕ್ ಮಾಡಿಸಿ ತಂದಳು. ಆ ಗಿಫ್ಟ್ ಬಾಕ್ಸ್ ಮೇಲೆ ಏನೆಂದು ಬರೆಯುತ್ತಾಳೆ ಎನ್ನುವ ಕುತೂಹಲ ಗುಂಡನಿಗೆ. ಬರೆದ ಮೇಲೆ ಗುಂಡ ಇಣುಕಿ ನೋಡಿದ – 'ಶುಭಾಶಯಗಳೊಂದಿಗೆ– ನಿನ್ನ ತಾತನ ಪತ್ನಿ' ಎಂದು ಬರೆದಿದ್ದಳು!

**ಕೃಷ್ಣಮೂರ್ತಿ ಭಟ್**






## ಮಾತಾಡಲು ಬಿಡಿ

ಪದ್ದು ತನ್ನ ಫ್ಯಾಮಿಲಿ ಡಾಕ್ಟರ್ ಬಳಿ ತನ್ನ ಗೋಳು ತೋಡಿಕೊಂಡಳು. 'ಡಾಕ್ಟ್ರೆ, ರಾತ್ರಿ ನಿದ್ರೇನೇ ಬರ್ತಿಲ್ಲ. ನಮ್ಮ ಜಮಾನರು ರಾತ್ರಿ ನಿದ್ರೆಗೆ ಜಾರಿದ ಕೂಡಲೇ ಮಾತಾಡೋಕೆ ಶುರುಮಾಡ್ತಾರೆ. ಹೇಗಾದ್ರೂ ಮಾಡಿ ನಿದ್ರೆಯಲ್ಲಿ ಮಾತಾಡೋದನ್ನ ನಿಲ್ಲಿಸಲು ಏನಾದ್ರೂ ಔಷಧಿ ಕೊಡಿ.'
'ಅಯ್ಯೋ ರಾಮಾ, ಇಷ್ಟಕ್ಕೆಲ್ಲಾ ಔಷಧಿ ಯಾಕೆ? ಹಗಲಿನಲ್ಲಿ ಅವರಿಗೆ ಮಾತಾಡೋಕೆ ಬಿಡಿ, ಸಾಕು. ರಾತ್ರಿ ಹೊತ್ತು ಅವರೂ ನೆಮ್ಮದಿಯಿಂದ ಮಲಗ್ತಾರೆ, ನಿಮಗೂ ಕಣ್ತುಂಬಾ ನಿದ್ರೆ ಆಗುತ್ತೆ' ಎಂದು ಸಲಹೆ ಕೊಟ್ಟರು!

**ಲತಾ ಹೆಗಡೆ**